ತಂದೆ ತೀರಿಹೋದದ್ದು ಹೇಗೆ?'

'ನನಗೆ ಸರಿಯಾಗಿ ಗೊತ್ತಿಲ್ಲ. ಅಮ್ಮ ಹೇಳುತ್ತಿದ್ದಳು: ಒಂದು ದಿನ ವಿಪರೀತ ಮಳೆಯಂತೆ. ಅಪ್ಪ ನೆನೆದುಕೊಂಡೇ ಬಂದರಂತೆ. ಊಟ ಅವರು ಮನೆಯಲ್ಲಿ ಮಾಡುತ್ತಿರಲಿಲ್ಲ. ಕಾರಣ ಅಮ್ಮನೂ ಹೇಳುತ್ತಿರಲಿಲ್ಲ. ಮಳೆಗೆ ಕರೆಂಟು ತೆಗೆದಿದ್ದರು. ಅಪ್ಪ ತಮ್ಮ ಕೋಣೆಗೆ ಹೋದವರು ಸುಮಾರು ಹೊತ್ತು ಏನೋ ಬರೆಯುತ್ತಿದ್ದರಂತೆ, ಮೇಣದ ಬತ್ತಿ ಇಟ್ಟುಕೊಂಡು. ಅವರು ಯಾವಾಗ ಮಲಗಿಕೊಂಡರೋ ಗೊತ್ತಿಲ್ಲ. ಬೆಳಿಗ್ಗೆ ನೋಡಿದಾಗ ಅವರು ಹೋಗಿಬಿಟ್ಟಿದ್ದರು.'

'ನೀವು ಇರಲಿಲ್ಲವೆ?'

'ನಾನು ಚಿಕ್ಕಮ್ಮನ ಮನೆಯಲ್ಲಿ ಬೆಳೆದದ್ದು.'

'ಓಹೋ! ಹಾಗೆ!'

'ಹೌದು! ಇವತ್ತಿಗೂ ನನಗೆ ತಂದೆಯ ಬಗ್ಗೆ ಅಪಾರ ಗೌರವ ಹಾಗೂ ಅಭಿಮಾನ. ಅದ್ಯಾಕೊ ತಂದೆಯ ಪ್ರೀತಿಗೆ ನಾನು ಎರವಾದೆ. ಗೊತ್ತಿಲ್ಲ, ಅಮ್ಮ ಯಾಕೆ ನನ್ನನ್ನು ತನ್ನ ಬಳಿ ಇಟ್ಟುಕೊಂಡಿಲ್ಲ ಅಂತ?! ನಾನು ಎಸ್ಸೆಸ್ಸೆಲ್ಸಿ ಫೇಲಾಗಿ ಕೂತಿದ್ದೆ. ಕಟ್ಟಿ ಕಟ್ಟಿ ಬೇಸರವಾಗಿತ್ತು. ನಮ್ಮ ಹಿತೈಷಿಯೊಬ್ಬರು ವಕೀಲರಿದ್ದರು. ಅನುಕಂಪದ ಆಧಾರದ ಮೇಲೆ ನನಗೆ ಕೆಲಸ ಕೊಡಿಸಲು ಆಗುತ್ತೆ ಎಂದರು. ತಂದೆಯದು ಅಕಾಲ ಮರಣ ಎಂದು ಅವರು ಸಾಬೀತುಪಡಿಸಿ ಈ ಕೆಲಸ ನನಗೆ ಕೊಡಿಸಿದರು.'

ಅಷ್ಟರಲ್ಲಿ ಪುಸ್ತಕ ವಾಪಸ್ಸು ಕೊಡಲು ಇಬ್ಬರು ವಿದ್ಯಾರ್ಥಿಗಳು ಬಂದರು. ಆಮೇಲೆ ಸಿದ್ಧರಾಜು ಬಂದರು. ಮಂದಾಕಿನಿಯನ್ನು ಚಹಾ ತರಲು ಕಳಿಸಿದರು.

## ಏಳು

ಸಂಜೆ ಕೋಣೆಗೆ ಬಂದಾಗ ಒಂದು ಅಚ್ಚರಿ ಕಾದಿತ್ತು. ಮಾವ ಅಲ್ಲಿ ಮನೆ ಓನರ್ ಜೊತೆ ಮಾತಾಡುತ್ತಾ ನಿಂತಿದ್ದರು. ಹಾಗೆಯೇ ನನ್ನನ್ನು 'ಬೆಟ್ಟಯ್ಯ ಹೋಟೆಲ್'ಗೆ ಕರೆದುಕೊಂಡು ಹೋದರು. ಅವರು ದೋಸೆಗೆ ಆರ್ಡರ್ ಮಾಡಿದರು. ನಾನು ಬಲವಂತ ಮಾಡಿದ್ದರಿಂದ ಕಾಫಿ ಹೇಳಿದೆ.

'ಒಂದು ವಿಷಯ ಇತ್ತು' ಮಾವ ತಿನ್ನುತ್ತಲೇ ಆರಂಭಿಸಿದರು.

'ಹೇಳಿ ಮಾವ.'

'ವೆಂಕಟರಾಂ ಈಗಲೋ ಆಗಲೋ ಎನ್ನುವ ಹಾಗಿದ್ದಾನೆ.'

'...'

'ಈಗ ಅವನನ್ನು ನೋಡಿಯೇ ನಿನ್ನ ಹತ್ತಿರ ಬಂದಿದ್ದು. ಆಸ್ಪತ್ರೆಯಲ್ಲೂ ಆಗೊಲ್ಲ ಅಂದುಬಿಟ್ಟರಂತೆ. ಮನೆಗೆ ಹಾಕಿಕೊಂಡು ಬಂದುಬಿಟ್ಟಿದ್ದಾರೆ.'

